ಜನರಿಗೆ ತೀರ್ಥಹಳ್ಳಿ, ಕೊಪ್ಪ ಮತ್ತು ಶೃಂಗೇರಿಗೆ ಹೋಗುವವರಿಗೆ ಹತ್ತಿರ ಆಗುತ್ತದೆ. ಶಾಲೆ ಮಕ್ಕಳಿಗೂ ಕೂಡ ಹತ್ತಿರವಾಗುತ್ತದೆ. ಎನ್ನತಕ್ಕ ಒಕ್ಕಾಯವನ್ನು ಹೈಪವರ್ ಕಮಿಟಿಯಲ್ಲಿ ತಂದಿದ್ದೇವೆ. ಅರಣ್ಯ ಇಲಾಖೆಯವರು ಅರಣ್ಯವನ್ನು ಕೊಡದೆ ಅನೇಕ ಮರಗಳು ಹೋಗುತ್ತದೆಂದು ಹೇಳುತ್ತಾರೆ. ಅವರು ಮಾಡಿರುತಕ್ಕ ಎರಡನೆಯ ಅಲೈನ್‌ಮೆಂಟ್ ಏನಿದೆ ಅಲ್ಲಿ ಹೆಚ್ಚಿನ ಮರ ಹೋಗುತ್ತದೆ. ಅರಣ್ಯ ಇಲಾಖೆಯವರ ಸಹಕಾರದಿಂದ ಎಂದನೇ ಅಲೈನ್‌ಮೆಂಟ್ ಅರಣ್ಯ ಎಂದು ಹೆಸರು ಮಾತ್ರ ಉಳಿದು ಕೊಂಡಿದೆ. ಇಲಾಖೆಯ ಸಹಾಯದಿಂದ ಕಾಡುಗಳನ್ನೆಲ್ಲಾ ಖಾಲಿ ಮಾಡಿ ಬಿಟ್ಟಿದ್ದಾರೆ. ಆದ್ದರಿಂದ ಒಂದನೇ ಅಲೈನ್‌ಮೆಂಟ್‌ಗೆ ಹೆಚ್ಚಿನ ಆದ್ಯತೆ ಕೊಟ್ಟು ಮೊದಲು ರಸ್ತೆ ಕೆಲಸ ಮಾಡಬೇಕೆಂದು ಒಕ್ಕಾಯ ಮಾಡುತ್ತಿದ್ದೇವೆ. ನಾನು ಮತ್ತು ಪಕ್ಕದ ಶಾಸಕರಾದ ರತ್ನಾಕರ್ ಅವರೂ ಇಲಾಖೆಯವರ ಜೊತೆಯಲ್ಲಿ ಸುಮಾರು ೪-೫ ಕಿ. ಮೀ. ಪೂರ್ತಿ ಜಾಗದಲ್ಲಿ ನಡೆದುಕೊಂಡು ಹೋಗಿ ನೋಡಿಕೊಂಡು ಬಂದಿದ್ದೇವೆ. ಅಲ್ಲಿ ಮರಗಳು ನಾಶವಾಗುವುದಿಲ್ಲ, ಆದ್ದರಿಂದ ಜನಕ್ಕೆ ಉಪಯೋಗ ಆಗತಕ್ಕ ರಸ್ತೆಯನ್ನು ಬೇಗ ಮಾಡಬೇಕೆಂದು ನಾವು ಒತ್ತಾಯಮಾಡುತ್ತಿದ್ದೇವೆ.

ಶ್ರೀ ಜೆ. ಹೆಚ್. ಪಟೇಲ್.—ಅಲ್ಲಿ ಅರಣ್ಯ ಇಲಾಖೆಯವರ ಪರವಾನಗಿಬೇಕು ಎಂಬ ಕಾರಣದಿಂದ ಸ್ವಲ್ಪ ತಡವಾಯಿತು. ಅಲ್ಲಿ ಕಾಡುಗಳು ಬಹಳ ಇವೆ ಎಂದು ನಾನು ಸಹ ಹೇಳಲಿಲ್ಲ. ಮರಗಳು ಇದೆ ಆದರೆ ಅರಣ್ಯ ಇಲಾಖೆಯವರ ಕ್ಲಿಯರೆನ್ಸ್ ಬೇಕಾಗಿರುವುದರಿಂದ ನಾವು ಸಚಿವರನ್ನು ಕರೆಸಿ ಕೆಲಸವನ್ನು ಅವರು ಭರವಸೆಯನ್ನು ಕೊಟ್ಟಿದ್ದಾರೆ. ತಾಲ್ಲೂಕುಗಳಿಗೆ ಆದ್ಯತೆಕೊಟ್ಟು ಈಗಾಗಲೇ ಕೆಲಸ ಶುರು ಮಾಡಬೇಕು. ತೀರ್ಥಹಳ್ಳಿ ತಾಲ್ಲೂಕಿನವರು ಹಾಗೂ ಹೊಸನಗರ ತಾಲ್ಲೂಕಿನವರು ಇದಕ್ಕೆ ಹೊಪಲು ಆದ್ಯತೆ ಕೊಡಬೇಕು ಎಂದು ಹೇಳುತ್ತಾರೆ. ಎರಡಕ್ಕೂ ಸಂಪೂರ್ಣ ಆದ್ಯತೆಕೊಟ್ಟು ಈಗ ಏನು ಮೊದಲು ಕೆಲಸ ಶುರು ಆಗಿದೆ ಅದನ್ನು ಅಬ್‌ಸ್ಟ್ರಕ್ಟ್ ಮಾಡಬೇಡಿ ಎಂದು ಹೇಳಿದ ಮೇಲೆ ಅದನ್ನು ಮಾಡಿದ್ದಾರೆ. ಒಂದನೇ ಅಲೈನ್‌ಮೆಂಟ್ ಕೆಲಸ ಆಗಿದೆ. ಅಲ್ಲಿ ಒಂದು ಸೇತುವೆಯನ್ನು ಕಟ್ಟಬೇಕಾಗಿದೆ. ಆ ಎರಡೂ ರಸ್ತೆಗಳು ಆಗುತ್ತವೆ, ಈ ಬಗ್ಗೆ ಕಾಂಟ್ರವರ್ಸಿ ಬೇಡ.

ಶ್ರೀ ಪಟಮಕ್ಕಿ ರತ್ನಾಕರ್.—ಒಂದು ಕೋಟಿ ಒಂಭತ್ತು ಲಕ್ಷ ರೂಪಾಯಿಯ ಯೋಜನೆ ಇದು. ಪ್ರಾಯಶಃ ಇದು ಸಚಿವ ಸಂಪುಟದಲ್ಲಿ ಮಂಜೂರಾಗಬೇಕೆಂದು ಕಾಣುತ್ತದೆ. ಸಚಿವರ ಸಂಪುಟದ ಅನುಮತಿ ಬೇಕೆಂದು ಕಾಣುತ್ತದೆ.

ಶ್ರೀ ಜೆ. ಹೆಚ್. ಪಟೇಲ್.—ಕರ್ನಾಟಕ ಪವರ್ ಕಾರ್ಪೋರೇಷನ್ ಫೈನಾನ್ಸಿನಿಂದ ಇದನ್ನು ಮಾಡುವುದು.

ಶ್ರೀ ಪಟಮಕ್ಕಿ ರತ್ನಾಕರ್.—ತಾವು ಮತ್ತು ವಿದ್ಯುತ್ ಸಚಿವರು ಇಬ್ಬರೂ ಸೇರಿ ಈ ಯೋಜನೆಯನ್ನು ಮಂಜೂರು ಮಾಡಿಸಿಕೊಡಬೇಕು ನಾನು ಮತ್ತು ಮಾನ್ಯ ಸ್ವಾಮಿರಾವ್ ಅವರು ಈ ಬಗ್ಗೆ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ನೀವು ಈ ಕೆಲಸ ಮಾಡಿಸಿ ಕೊಟ್ಟರೆ ಗ್ರಾಮಸ್ಥರ ಪರವಾಗಿ ಒಂದು ಭಾರಿ ಸನ್ಮಾನಸನ್ನು ಮಾನ್ಯ ಜೆ. ಹೆಚ್. ಪಟೇಲ್‌ರವರಿಗೂ ಮತ್ತು ಮಾನ್ಯ ಲಕ್ಷ್ಮೀನರಸಿಂಹಯ್ಯನವರಿಗೂ ಮಾಡಬೇಕೆಂದು ಮಾಡಿದ್ದೇವೆ. ಆದ್ದರಿಂದ, ಆದಷ್ಟು ಬೇಗ ಸನ್ಮಾನ ಸಮಾರಂಭ ಏರ್ಪಾಡು ಮಾಡುವ ಹಾಗೆ ತಾವು ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್.—ಆದಷ್ಟು ಬೇಗ ಮಾಡುತ್ತೇವೆ.

(೨) ಗುಬ್ಬಿ ನಗರದ ಸರ್ಕಾರಿ ಜೂನಿಯರ್ ಕಾಲೇಜು ಆವರಣದಲ್ಲಿ ಕಟ್ಟಡ ಕಟ್ಟುವ ಕುರಿತು

ಶ್ರೀ ಜಿ. ಎಸ್. ಶಿವನಂಜಪ್ಪ.—ಅಧ್ಯಕ್ಷರೇ, ಗುಬ್ಬಿ ನಗರದಲ್ಲಿ ಪ್ರಾರಂಭವಾದ ಪ್ರಥಮ ವರ್ಜಿ ಕಾಲೇಜಿಗೆ ನಾಗರೀಕರು ಕೊಟ್ಟಿರುವ ಪಂತಿಗೆಯಿಂದ ಜೂನಿಯರ್ ಕಾಲೇಜಿನ ಆವರಣದಲ್ಲಿ ಕಟ್ಟಡ ಕಟ್ಟಿಸಲು ಕ್ರಮ ತೆಗೆದುಕೊಳ್ಳುವ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಡಾ॥ ಜೀವರಾಜ್ ಆಳ್ವ (ಉನ್ನತ ಶಿಕ್ಷಣ ಸಚಿವರು).—ಅಧ್ಯಕ್ಷರೆ, ಗುಬ್ಬಿಯಲ್ಲಿ ಪ್ರಥಮ ವರ್ಜಿ ಕಾಲೇಜು ೧೨-೮-೮೩ರಲ್ಲಿ ಪ್ರಾರಂಭಿಸಲಾಗಿದೆ. ಸದ್ಯದಲ್ಲಿ ತರಗತಿಯನ್ನು ಸರ್ಕಾರಿ ಬಾಲಕಿಯರ ಪ್ರೌಢಶಾಲೆಯಲ್ಲಿ ನಡೆಸಲಾಗುತ್ತಿದೆ. ಗುಬ್ಬಿಯ ನಾಗರಿಕರು ೧.೦೦ ಲಕ್ಷ ರೂ. ಗಳನ್ನು ಪ್ರಥಮವರ್ಜಿ ಕಾಲೇಜು ಕಟ್ಟಡಕ್ಕಾಗಿ ನೀಡಿರುವುದು ನಿಜ. ಇದರ ಬಗ್ಗೆ ಪ್ರಸ್ತಾವನೆಯನ್ನು ಕೊಡಲಾಗಿದೆ. ಇದರ ಜೊತೆಗೆ ಈಗಾಗಲೇ ಗುಬ್ಬಿಯಲ್ಲಿ ಸರ್ಕಾರಿ ಪ್ರಥಮವರ್ಜಿ ಕಾಲೇಜು ಕಟ್ಟಡ

ನಿರ್ಮಿಸಲು ಸೂಕ್ತ ನಿವೇಶನ ಮಂಜೂರಾತಿಗಾಗಿ ತುಮಕೂರು ಜಿಲ್ಲಾಧಿಕಾರಿಗಳನ್ನು ಕೋರಲಾಗಿದೆ. ಈಗ ಸರ್ಕಾರಿ ಕಿರಿಯ ಕಾಲೇಜಿನ ಆವರಣದಲ್ಲಿ ಪ್ರಥಮದರ್ಜೆ ಕಾಲೇಜು ಕಟ್ಟಡವನ್ನು ಕಟ್ಟುವ ಬಗ್ಗೆ ಪ್ರಸ್ತಾವನೆ ಬಂದ ಕೂಡಲೇ ಪರಿಶೀಲಿಸಿ ಅವಶ್ಯಕತೆಯ ಮೇಲೆ ಕ್ರಮ ಕೈಗೊಳ್ಳಲಾಗುವುದು.

† ಶ್ರೀ ಜಿ. ಎಸ್. ಶಿವಸಂಜಪ್ಪ.—ಅಧ್ಯಕ್ಷರೆ, ಈ "ಪ್ರಸ್ತಾವನೆ" ಎನ್ನುವ ಪದ ನನಗೆ ಅರ್ಥವಾಗುತ್ತಿಲ್ಲ. ಜ್ಯೂನಿಯರ್ ಕಾಲೇಜಿನ ಆವರಣದಲ್ಲಿ ಸುಮಾರು ೧೦ ಎಕರೆ ಖಾಲಿ ಜಮೀನು ಇದೆ. ಈಗ ಅಲ್ಲಿ ಪಕ್ಕಾ ಬಿಲ್ಡಿಂಗ್ ಕಟ್ಟಲಿಕ್ಕೆ ನಿಮ್ಮ ಹತ್ತಿರ ಹಣ ಇಲ್ಲ. ಈಗ ಅಲ್ಲಿ ದಾನಿಗಳು ಡೊನೇಟ್ ಮಾಡಿರತಕ್ಕ ದಂತಿಗೆ ಹಣದಲ್ಲಿ ನಾಲ್ಕು ಷೆಡ್ಡುಗಳನ್ನು ಕಟ್ಟಿಸಿಕೊಡಿ ಅಂದರೆ, ಈ ರೀತಿ ಪ್ರಸ್ತಾವನೆ ಬಂದ ಕೂಡಲೆ ಎಂದು ಹೇಳುತ್ತಿದ್ದೀರಿ. ಈಗ ಈ ಕಾಲೇಜು ನಡೆಯುತ್ತಿದೆ ಎಂದು ಹೇಳಿದ್ದೀರಿ, ಗರ್ಲ್ಸ್‌ಹೈಸ್ಕೂಲಿನಲ್ಲಿ ಒಂದು ಕ್ಲಾಸು ನಡೆಯುತ್ತಿದೆ, ಮಿಡಲ್‌ಸ್ಕೂಲಿನಲ್ಲಿ ಒಂದು ಕ್ಲಾಸು ನಡೆಯುತ್ತಿದೆ, ಮತ್ತೊಂದು ಕ್ಲಾಸು ಪ್ರೈಮರಿ ಸ್ಕೂಲಿನಲ್ಲಿ ನಡೆಸುತ್ತಿದ್ದಾರೆ. ಆಫೀಸ್ ರೂಮೇ ಬೇರೆ, ಸ್ಟೋರ್ ರೂಮೇ ಬೇರೆ, ಈಗಾಗಿ ಅಲ್ಲಿ ಬಹಳಷ್ಟು ತೊಂದರೆಯಾಗಿದೆ. ಸುಮಾರು ಎರಡು ತಿಂಗಳಿಂದಲೂ ನಾನು ಆ ಊರಿಗೆ ಹೋಗುವ ಹಾಗೆ ಇಲ್ಲ. ಆ ಒಂದು ಪರಿಸ್ಥಿತಿ ನನಗೆ ಬಂದಿದೆ. ಈಗ ಜ್ಯೂನಿಯರ್ ಕಾಲೇಜ್ ಆವರಣದಲ್ಲಿ ಸುಮಾರು ೧೦ ಎಕರೆ ಜಮೀನು ಏನಿದೆ ಅದು ಜ್ಯೂನಿಯರ್ ಕಾಲೇಜು ದಕ್ಷಿಣ ಭಾಗದಲ್ಲಿ ಇದೆ, ಉತ್ತರ ಭಾಗದಲ್ಲಿ ನಾಲ್ಕು ಷೆಡ್ಡುಗಳನ್ನು ಕಟ್ಟಿಸಲು ಅನುಮತಿ ಕೊಟ್ಟರೆ ಸಾಕು. ಅದಕ್ಕೋಸ್ಕರವೇ ಈ ಪ್ರಸ್ತಾವನೆ ಬರುವುದು ಬೇಕಾಗಿಲ್ಲ. ನಾನು ನಿಮಗೆ ಒಂದು ಲೆಟರ್ ಕೊಟ್ಟಿದ್ದೆ, ನೀವು ಅದರ ಮೇಲೆ ಸೆಕ್ರೆಟರಿಯವರಿಗೆ ಬರೆದು ಆರು ತಿಂಗಳಾದರೂ ಏನು ಮಾಡಲಿಲ್ಲ. ಆದ್ದರಿಂದ, ಇವತ್ತೇ ತಾವು ಆಶ್ವಾಸನೆ ಕೊಡಬೇಕೆಂದು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಜೀವರಾಜ್ ಆಳ್ವ.—ಯಾವುದೇ ಕಾಲೇಜುಗಳಿಗೆ ಕಟ್ಟಡ ಕಟ್ಟಿಕೊಡಬೇಕಾದರೆ ಪ್ರಸ್ತಾವನೆ ಸರ್ಕಾರಕ್ಕೆ ಬರಬೇಕಾಗುತ್ತದೆ. ಆದ್ದರಿಂದ ಮಾನ್ಯ ಶಾಸಕರಿಗೆ ತಮ್ಮ ಮೂಲಕ ತಿಳಿಯಪಡಿಸುತ್ತೇನೆ. ಏನೆಂದರೆ ಸರ್ಕಾರ ಖಂಡಿತ ಇದಕ್ಕೆ ಒಪ್ಪಿಗೆ ಕೊಡುತ್ತದೆ. ಆದರೆ ಅಡ್ಮಿನಿಸ್ಟ್ರೇಟಿವ್ ಪ್ರಪೋಸಲ್, ಪ್ಲಾನ್ ಮುಂತಾದವು ಸರ್ಕಾರಕ್ಕೆ ಬರಬೇಕಾಗುತ್ತದೆ, ದಾನಿಗಳು ಕೊಟ್ಟಿರತಕ್ಕ ದಂತಿಗೆಯಿಂದ ನಾಲ್ಕು ಕಟ್ಟಡ ಕಟ್ಟಿಸಿಕೊಡಬೇಕೆಂದು ಮಾನ್ಯ ಶಾಸಕರು ಏನು ಹೇಳಿದ್ದಾರೆ ಅದನ್ನು ನಾನು ಒಪ್ಪುತ್ತೇನೆ. ಈ ಬಗ್ಗೆ ಪ್ರಪೋಸಲ್ ಸರ್ಕಾರಕ್ಕೆ ಬೇಕಾಗುತ್ತದೆ. ಎಷ್ಟು ರೂಮುಗಳನ್ನು ಕಟ್ಟುತ್ತಾರೆ ಏನನ್ನುವುದು ಸರ್ಕಾರಕ್ಕೆ ಗೊತ್ತಾಗಬೇಕು. ಮಾನ್ಯ ಸದಸ್ಯರು ಅದನ್ನು ಬೇಗ ಕಳುಹಿಸಿಕೊಡಬೇಕು. ನಾವು ಅದನ್ನು ಮಾಡಿಸುತ್ತೇವೆ.

ಶ್ರೀ ಜಿ. ಎಸ್. ಶಿವಸಂಜಪ್ಪ.—ನಿಮ್ಮ ಡಿಪಾರ್ಟ್‌ಮೆಂಟಿಗೆ ೧೯೮೫ರಲ್ಲಿ ದುಡ್ಡು ಡಿಪಾಸಿಟ್ ಮಾಡಿದ್ದಾರೆ. ಇವೊತ್ತು ಸಾರ್ವಜನಿಕರು ಏನು ಹೇಳುತ್ತಿದ್ದಾರೆಂದರೆ, ನೀವೇ ಕಟ್ಟಿಸಿಕೊಡಿ ಅಥವಾ ಜಿಲ್ಲಾಪರಿಷತ್ ಇಂಜಿನಿಯರ್‌ಗೆ ಆದೇಶ ಕೊಡಿ ಎಂದು ಹೇಳುತ್ತಿದ್ದಾರೆ. ಆದ್ದರಿಂದ, ಟೆಂಪರರಿ ಷೆಡ್ಸ್ ಕಟ್ಟಿಸದೇ ಹೋದರೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ, ತಾವು ಅವರಿಗೆ ಡೈರೆಕ್ಷನ್ ಕೊಡಬೇಕೆಂದು ಹೇಳಿಕೊಳ್ಳುತ್ತೇನೆ.

ಶ್ರೀ ಜೀವರಾಜ್ ಆಳ್ವ.—ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡುತ್ತೇನೆ.

(೩) ಹೆಚ್. ಡಿ. ಕೋಟೆ ಎನ್. ಬೇಗೂರು ಅರಣ್ಯ ವಲಯದ ಅಧಿಕಾರಿಗಳು ಹಾರಿಸಿದ ಗುಂಡಿನಿಂದ ಒಬ್ಬ ಯುವಕನ ಮರಣ ಮತ್ತಿತ್ತರರಿಗೆ ಗಾಯಗಳಾಗಿರುವ ಬಗ್ಗೆ

ಶ್ರೀ ಜಿ. ರಾಜುಗೌಡ. ಮಾನ್ಯ ಅಧ್ಯಕ್ಷರೆ, ಹೆಚ್. ಡಿ. ಕೋಟೆ ತಾಲ್ಲೂಕು ಎನ್. ಬೇಗೂರು ಅರಣ್ಯ ವಲಯದಲ್ಲಿ ದಿನಾಂಕ: ೫-೫-೮೮ ರಂದು ಅರಣ್ಯ ಇಲಾಖೆಯವರು ಹಾರಿಸಿದ ಗುಂಡಿನಿಂದ ಯುವಕನೊಬ್ಬನ ಮರಣವಾಗಿ ಇತರರಿಗೆ ಗಾಯಗಳಾಗಿರುವ ಬಗ್ಗೆ ಮಾನ್ಯ ಅರಣ್ಯ ರಾಜ್ಯಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.